**ವಿಶೇಷ, ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ**

**ಎಸ್.ಸಿ.ನಂ. 94 / 2023**

**ಪಿರ್ಯಾದುದಾರರು :**

ಸರ್ಕಾರದ ಪರವಾಗಿ
ಚಿಕ್ಕಜಾಜೂರು ಆರಕ್ಷಕ ಠಾಣೆ

**ವಿರುದ್ಧ**

**ಆರೋಪಿ / ತರು :**

ದೇವರಾಜ ತಂದೆ ಬಂಜಯ್ಯ, 24 ವರ್ಷ. ಜಿರಾಯ್ತಿ, ವಾಸ ಬಿ.ದುರ್ಗ ಗ್ರಾಮ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.

## : ಆರೋಪಣೆ :

ಶ್ರೀಮತಿ. ಬಿ.ಕೆ.ಕೋಮಲ., ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿತ್ರದುರ್ಗ ಆದ ನಾನು ನಿಮ್ಮನ್ನು ಈ ಕೆಳಕಂಡ ಆರೋಪಣೆಗೆ ಒಳಪಡಿಸುತ್ತೇನೆ.

1. ದಿನಾಂಕ 14–09–2022 ರಂದು ಸಂಜೆ 6.00 ಗಂಟೆಯಲ್ಲಿ ಬಿ.ದುರ್ಗ ಗ್ರಾಮದ ಪ್ರೌಢಶಾಲೆಯ ಮುಂಭಾಗದ ಆಟದ ಮೈದಾನದಲ್ಲಿ ಆರೋಪಿಯಾದ ನೀವು ಚಾಸಾ–1 ಉಷಾ ಮತ್ತು ಚಾಸಾ–7 ಗಣೇಶರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ ಕಲಂ 504 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ಆದ ನೀವು ಚಾಸಾ–1 ರವರಿಗೆ ಕಲ್ಲಿನಿಂದ ಹೊಟ್ಟೆಗೆ ಮತ್ತು ಬೆನ್ನಿಗೆ ಹೊಡೆದು

ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ ಕಲಂ 324 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ಆದ ನೀವು ಚಾಸಾ–1 ಮತ್ತು ಚಾಸಾ–7 ರವರಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆದು ನೋವನ್ನುಂಟು ಮಾಡಿದ್ದು, ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ ಕಲಂ 323 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ.

4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ಆದ ನೀವು ಚಾಸಾ–1 ರವರ ಜಾಕೀಟಿಗೆ ಕೈಹಾಕಿ ಎಳೆದು ಮಾನಕ್ಕೆ ಚ್ಯುತಿಯುಂಟು ಮಾಡಿದ್ದು, ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ ಕಲಂ 35 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ.

5. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ಆದ ನೀವು ಚಾಸಾ–1 ರವರ ಕುತ್ತಿಗೆ ಹಿಚುಕಿ ಸಾಯಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದ್ದು, ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ದಂಡ ಸಂಹಿತೆ ಕಲಂ 506 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದೀರಿ.

ಈ ಮೇಲಿನ ಹೇಳಿದ ಆರೋಪಣೆಗಳನ್ನು ನಿಮ್ಮ ಮೇಲೆ ವಿಚಾರಣೆ ನಡೆಸಲಾಗುವುದು ಈ ಮೂಲಕ ಆದೇಶಿಸಿರುತ್ತೇನೆ.

**(ಬಿ.ಕೆ.ಕೋಮಲ)**
ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.

ಜಿಈಎಸ್***